ಕೈಯಲ್ಲಿ ಹಿಡಿದಿದ್ದ ನಯವಾದ ಬ್ಯಾಗನ್ನು ಗಮನಿಸುವುದೇ ಚಂಪಾಳಿಗೊಂದು ಉದ್ಯೋಗವಾಗಿತ್ತು. ಹೊಸದರಲ್ಲಿ ಒಮ್ಮೆ ಅಲ್ಲಿಗೊಂದು ಸಿನಿಮಾ ನೋಡಲು ಅಪ್ಪ, ಅಮ್ಮ, ತಮ್ಮನೊಂದಿಗೆ ಹೋಗಿದ್ದಳು. ಒಳಗೆ ಹೊಳೆಯುವ ಗೋಡೆಗಳು, ಜಗಝಗಿಸುವ ಬೆಳಕಿನ ದೀಪಗಳು, ಚಪ್ಪಲಿ ಅಂಗಡಿ, ಬಟ್ಟೆಯಂಗಡಿ, ಘಮ ಘಮಿಸುವ ಬನ್ನು ಬ್ರೆಡ್ಡಿನ ಸುಗಂಧ, ಇನ್ನು ಒಳಗಡೆ ಕರಿದ ಕೋಳಿಯ ಘಮವಿತ್ತು. ಅಲ್ಲಿನ ತರಕಾರಿ ಅಂಗಡಿಯಲ್ಲಿನ ಹಣ್ಣು ತರಕಾರಿಗಳು ಫಳಫಳ ಹೊಳೆಯುತ್ತಿದ್ದವು. ಎಲ್ಲಿಯೂ ಕಸವಿಲ್ಲ, ಎಲ್ಲವೂ ವ್ಯವಸ್ಥಿತ, ಸುಸಜ್ಜಿತ. ಅಮ್ಮ ದಪ್ಪ ಜರಿಯ ಸೀರೆ ಉಟ್ಟಿದ್ದಳು, ದಪ್ಪದಾದ ಚಿನ್ನದ ಸರ, ಬಳೆ ಹಾಕಿದ್ದಳು. ಚಂಪಾ ಹೊಸ ಚೂಡಿ ತೊಟ್ಟಿದ್ದಳು. ಅದೇಕೋ ಅಲ್ಲಿದ್ದ ಬೇರೆ ಹುಡುಗಿಯರ ಟಾಪು, ಉದ್ದ ಲಂಗ, ಜೀನ್ಸ್, ಟೀಶರ್ಟ್‌ಗಳ ಎದುರು ಇವಳ ಹೊಸ ಬಟ್ಟೆ, ಮಾಸಿದ ಬಟ್ಟೆಯಂತೆ ಭಾಸವಾಗುತ್ತಿತ್ತು. ಸಿನಿಮಾ ಟಿಕೆಟ್ ಕೊಳ್ಳಲು ಹೋದ ಅಪ್ಪ, ಹಣ ಕೊಡುವಾಗ ಟಿಕೆಟ್ ಕೊಡುವವನನ್ನು ತನ್ನ ಕಣ್ಣಿನ ಕ್ರೋಧಾಗ್ನಿಯಲ್ಲಿ ಸುಟ್ಟುಬಿಡುವಂತೆ ಬುಸುಗುಟ್ಟುತ್ತಾ ಕೂಗಾಡುತ್ತಿದ್ದಾಗ, ಸುತ್ತ ಮುತ್ತಲಿನ ಜನರು ಅವರನ್ನು ನೋಡಿ ಚದುರಿ ಹೋದರು. ಅಮ್ಮ ಸಮಾಧಾನ ಮಾಡಿ, ತನ್ನ ಕುಪ್ಪಸದ ತಿಜೋರಿಯಿಂದ ಹಣ ತೆಗೆದು ಕೊಟ್ಟು, 'ಎಲ್ಲರೆದುರು ಮಾನ ಕಳೀಬೇಡ, ಬಂದ ಮೇಲೆ ಸುಮ್ಮನೆ ಕೊಟ್ಟು, ನೋಡಿ ಹೋಗೋಣ' ಎಂದು ಥೀಯೇಟರ್ ಒಳಗೆ ಹೋದರು. ಅಲ್ಲಿ ಕೂರುವ ಕೆಂಪು ಸೋಫಾಗಳು, ಮೈ ತಣ್ಣಗಾಗಿಸುವ ಏಸಿ ಹವೆ, ಚೂರು ಕೊಳಕಿಲ್ಲದ ಕಾರ್ಪೆಟ್‌ಗಳನ್ನು ನೋಡಿ, ಸಿನಿಮಾ ನೋಡಿದರೆ ಇಂತಹ ಥೇಟರ್‌ನಲ್ಲೆ ನೋಡಬೇಕು ಎಂದು ಚಂಪಾ ಪ್ರತಿಜ್ಞೆ ಮಾಡಿಬಿಟ್ಟಿದ್ದಳು. ಮಧ್ಯಂತರದಲ್ಲಿ ಹತ್ತು ರೂಪಾಯಿ ಪಾಪ್‌ಕಾರ್ನ್‌ಗೆ ಇನ್ನೂರೈವತ್ತು ಎಂದಾಗ ಅಪ್ಪನ ಕಣ್ಣುಗಳಲಿದ್ದ ಅದೇ ಕ್ರೋಧಾಗ್ನಿ ಅಮ್ಮನ ಕಣ್ಣಿನಲ್ಲಿ ಕಾಣಿಸಿತು.

ಚೈತ್ರಮಾಸದ ಆಗಮನ ಚಂಪಾ ಮತ್ತು ಬಾಲರ ವಿಮೋಚನೆಯ ಯೋಜನೆಗೆ ಹೊಸ ಚಿಗುರು ತಂದಿತ್ತು. ಚೈತ್ರದ ಮೊದಲ ಪೂರ್ಣಿಮೆಯ ದಿನ ಪೇಟೆ ಕರಗ ಅಥವಾ ಬೆಂಗಳೂರು ಕರಗದ ದಿನ. ಪ್ರತಿ ವರ್ಷ ಚಂಪಾಳ ಅಪ್ಪ ಕರಗದ ಹನ್ನೊಂದು ದಿನವೂ ಕರಗದ ಪೂಜಾರಿಯ ಜೊತೆ ಇರುತ್ತಿದ್ದ. ಕರಗದ ಕತ್ತಿ ತೆಗೆದು ತೊಳೆದು, ಒರೆಸಿ ಭಕ್ತಿಯಿಂದ ಪೂಜೆ ಮಾಡಿ ದೇವಸ್ಥಾನದ ಸೇವೆಗೆ ನಿಲ್ಲುತಿದ್ದ. ಅವಳಮ್ಮ ಹೂವಿನ ವ್ಯಾಪಾರ ನೋಡಿಕೊಂಡು, ದೇವಸ್ಥಾನದ ಸೇವೆಯಲ್ಲಿ ದುಡಿಯುತ್ತಿದ್ದಳು. ಈ ಹತ್ತು ದಿನ ಖರ್ಚಿನ ಮೇಲೆ ಹಿಡಿತ ಮಾಡುತ್ತಿರಲಿಲ್ಲ. ಮಗಳ ಮೇಲೆ ನಿಗಾ ಇಡಲು ಅವಳಿಗೆ ಪುರುಸೊತ್ತಿರುತ್ತಿರಲಿಲ್ಲ. ಹೂವಿನಲ್ಲಿ ತ್ರಿಶೂಲ, ಶಂಖ, ಚಕ್ರ, ನಾಮ, ದೀಪಗಳು ಇನ್ನು ಏನೇನೋ ಕಲಾಕೃತಿಗಳು ಮೂಡುವಂತೆ ಕಟ್ಟುತ್ತಿದ್ದರು. ಅದನ್ನು ಮಗಳಿಗೆ ಹೇಳಿಕೊಡುತ್ತಿದ್ದಳು. ಮೊದಲ ದಿನದ ಷಷ್ಠಿ ಹೊಂಗೆಮರದ ಪೂಜೆಯಿಂದ ಪ್ರಾರಂಭವಾಗಿ, ಧ್ವಜಾರೋಹಣ, ಅದಾದ ಮೇಲೆ ಪ್ರತಿ ರಾತ್ರಿ ವಿಶೇಷ ಪೂಜೆಗಳು, ದ್ವಾದಶಿಗೆ ದೀಪೋತ್ಸವ, ತ್ರಯೋದಶಿಗೆ ಹಸಿ ಕರಗ, ಚತುರ್ದಶಿಗೆ ಪೊಂಗಲ್ ಸೇವೆ, ಚೈತ್ರ ಪೂರ್ಣಿಮೆಯಂದು ಕರಗ ಶಕ್ತ್ಯೋತ್ಸವ ಮಲ್ಲಿಗೆಯ ಕರಗ ಮತ್ತು ಧರ್ಮರಾಯಸ್ವಾಮಿಯ ಮಹಾ ರಥೋತ್ಸವ, ಅದಾದ ಮೇಲೆ ಮಾರನೆಯ ರಾತ್ರಿ ಏಳು ಸುತ್ತಿನ ಕೋಟೆ ದೇವಾಲಯದಲ್ಲಿ ಹರಿಕಥೆ ಪುರಾಣ ಮತ್ತೆ ಶಾಂತಿ, ಕೊನೆಯ ದಿನ ವಸಂತೋತ್ಸವ ಕೊನೆಯಲ್ಲಿ ಧ್ವಜ ಅವರೋಹಣ. ಈ ಹತ್ತೂ ದಿನಗಳು ಚಂಪಾಳ ಮನೆ ಹತ್ತಿರ ಇರೋ ರಂಗಮಂದಿರದಲ್ಲಿ ಎಂಎಲ್‌ಎ ಸಾಹೇಬರು ಪ್ರತಿ ರಾತ್ರಿ ಹರಿಕಥೆ ಏರ್ಪಡಿಸಿದ್ದರು.

ಮೊದಲನೇ ದಿನದ ಹರಿಕಥೆಗೆ ಅಜ್ಜಿಯ ಜೊತೆ ಚಂಪಾ ಕೂಡ ಹೋಗಿದ್ದಳು. ಬಾಲ ತನ್ನ ತಾಯಿಯನ್ನ ಬಲವಂತವಾಗಿ ಕರೆದುಕೊಂಡು ಬಂದಿದ್ದು, ಮಗನಿಗೆ ಇಷ್ಟು ಭಕ್ತಿ ಆಸಕ್ತಿ ಇರುವುದು ತಿಳಿದು ಅವರಮ್ಮನಿಗೆ ಆದ ಸಂತೋಷ ಕಡಿಮೆಯೇನಲ್ಲ. ಅವರಮ್ಮನನ್ನು ಚಂಪಾಳ ಅಜ್ಜಿಗೆ ಜೋಡಿ